ಪಿಡಬ್ಲ್ಯೂ-1

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ 09-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಪಿ.ಜಿ.ಎಲ್. ಆರೋಪಿ ಪರ ವಕೀಲರಿಂದಃ**

1. ಮಣಿಕಂಠ ಟ್ರ್ಯಾಕ್ಟರ ಶೋ ರೂಂ ನೋಂದಾಯಿತ ಸಂಸ್ಥೆಯಾಗಿರುತ್ತದೆ. ಸದ್ರಿ ಸಂಸ್ಥೆಯು ನೋಂದಾವಣಿ ಆಗಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನೋಂದಾವಣಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಹಾಜರು ಮಾಡದೆ ಇದ್ದರೂ ಸಹ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಸಲ್ಲಿಸುವ ಪೂರ್ವದಲ್ಲಿ ಆರೋಪಿಗೆ ಕಾನೂನು ಪ್ರಕಾರ ನೋಟಿಸನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ನನ್ನ ವಕೀಲರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಕೀಲರಿಗೆ ಆ ರೀತಿ ನೋಟಿಸನ್ನು ಕೊಡಲು ಮಾಹಿತಿಯನ್ನು ನಮ್ಮ ಫರ್ಮನಲ್ಲಿ ಕೆಲಸ ಮಾಡುತ್ತಿದ್ದ ಮ್ಯಾನೇಜರ ಕೊಟ್ಟಿರುತ್ತಾರೆ. ಸದ್ರಿ ಲಿಗಲ್ ನೋಟಿಸಗೆ ನಾನೇ ಸಹಿ ಮಾಡಿರುತ್ತೇನೆ. ಸದ್ರಿ ನೋಟಿಸನಲ್ಲಿ ಬರೆದ ವಿಷಯದ ಬಗ್ಗೆ ಸಂಪೂರ್ಣ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ಸದ್ರಿ ಲಿಗಲ್ ನೋಟಿಸ ಕೊಡಲು ಮಾಹಿತಿಯನ್ನು ನೀಲಪ್ಪ ತಂದೆ ಸಣ್ಣಕಲ್ಲಪ್ಪ ಗೌಡನಾಯ್ಕು ಎನ್ನುವವರು ಕೊಟ್ಟಿದ್ದು ಅವರೇ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರು ನಮ್ಮ ಮ್ಯಾನೇಜರ ಎಂದು ನುಡಿಯುತ್ತಾರೆ. ಸದ್ರಿ ಗೌಡನಾಯ್ಕರವರು ಈಗ ಮರಣ ಹೊಂದಿರುತ್ತಾರೆ. ನಾನು ಸಲ್ಲಿಸಿರುವ ಪಿರ್ಯಾದಿಯಲ್ಲಿ ಸದ್ರಿ ನೀಲಪ್ಪರವರು ಮರಣ ಹೊಂದಿದ ಬಗ್ಗೆ ಎಲ್ಲಿಯೂ ತಿಳಿಸಿಲ್ಲ ಎಂದರೆ ಸಾಕ್ಷಿಯು ಆತನು ಕೆಲಸ ಬಿಟ್ಟು ಹೋಗಿ ತುಂಬಾ ವರ್ಷಗಳಾಗಿದ್ದು ಮರಣ ಹೊಂದಿದ್ದ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು

ನುಡಿಯುತ್ತಾರೆ. ಸದ್ರಿ ನೀಲಪ್ಪರವರನ್ನು ನಮ್ಮ ಸಂಸ್ಥೆಯಲ್ಲಿ ಮ್ಯಾನೇಜರ ಎಂದು ನೇಮಕ ಮಾಡಿಕೊಂಡ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅವರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದು ದಾಖಲೆ ಹಾಜರು ಮಾಡಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನೇಮಕ ಮಾಡಿರುವ ಬಗ್ಗೆ ದಾಖಲೆ ಹಾಜರು ಪಡಿಸಲು ನನಗೇನೂ ತೊಂದರೆ ಇರಲಿಲ್ಲ.

**2.** ಆರೋಪಿಗೆ ಲಿಗಲ್ ನೋಟಿಸನ್ನು ನೀಡಲು ಸದ್ರಿ ನೀಲಪ್ಪರವರಿಗೆ ನೀವು ಅಧಿಕಾರ ಪತ್ರವನ್ನು ಕೊಟ್ಟಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ಸಂಸ್ಥೆಯಲ್ಲಿ ಮ್ಯಾನೇಜರ ಆಗಿದ್ದು, ನೋಟಿಸ ಕೊಡಲು ಅಧಿಕಾರ ಪತ್ರವನ್ನು ಕೊಟ್ಟಿಲ್ಲ.

3. ಆರೋಪಿಯು ಈ ಪ್ರಕರಣದಲ್ಲಿ ಸಲ್ಲಿಸಿರುವ ಚೆಕ್‌ನ್ನು ಬರೆಯಿಸಿಕೊಂಡು ಬಂದು ಕೊಟ್ಟಿರುತ್ತಾರೆ. ಚೆಕ್‌ನಲ್ಲಿ ರೂ.67,263/- ಅಥವಾ 67,267/- ಎಂದು ಬರೆದು ಕೊಟ್ಟಿರುತ್ತಾರೆ. ಸದ್ರಿ ಚೆಕ್‌ನ್ನು ನಮ್ಮ ಫರ್ಮ ಹೆಸರಿಗೆ ಬರೆದು ಕೊಟ್ಟಿರುತ್ತಾರೆ. ಸದ್ರಿ ಚೆಕ್‌ನಲ್ಲಿ ಇಂಗ್ಲೀಷ ಅಕ್ಷರದಲ್ಲಿ ಬರೆದಿದ್ದರೋ ಅಥವಾ ಕನ್ನಡದಲ್ಲಿ ಬರೆದಿದ್ದರೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದರ ಬಗ್ಗೆ ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಇಂಗ್ಲೀಷನಲ್ಲಿ ಬರೆದಿರಬಹುದೆಂದು ನುಡಿಯುತ್ತಾರೆ. ಆರೋಪಿಯು ಚೆಕ್‌ನ್ನು ನಮ್ಮ ಫರ್ಮ ಹೆಸರಿಗೆ ಬರೆದುಕೊಟ್ಟಿಲ್ಲ ನಾವೇ ನಮ್ಮ ಫರ್ಮ ಸೀಲ್‌ನ್ನು ಹಾಕಿ ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದ್ರಿ ಚೆಕ್‌ನ್ನು ಹೆಚ್ ಡಿ ಎಫ್ ಸಿ ಬ್ಯಾಂಕಗೆ ನಮ್ಮ ಅಕೌಂಟೆಂಟರವರು ಹಾಕಿರುತ್ತಾರೆ. ಸದ್ರಿ ಚೆಕ್‌ನ್ನು ಎರಡು ಸಲ ಬ್ಯಾಂಕಗೆ ಹಾಕಿರುತ್ತಾರೆ.

ಪಿಡಬ್ಲ್ಯೂ-1

4. ಯಾವುದೇ ವಾಹನವನ್ನು ಖರೀದಿ ಮಾಡುವಾಗ, ವಾಹನದ ಸಂಪೂರ್ಣ ಹಣವನ್ನು ಜಮಾ ಮಾಡಿದಾಗ ಮಾತ್ರ ವಾಹನವನ್ನು ಹೊರಗೆ ಬಿಡುತ್ತೀರಿ ಎಂದರೆ ಸಾಕ್ಷಿಯು ರೈತರೊಂದಿಗೆ ನಾನು ಹೊಂದಾಣಿಕೆ ಇರುವುದರಿಂದ ಕೆಲವೊಮ್ಮೆ ಬಾಕಿ ಹಣ ಕೊಡುವುದು ಇದ್ದರೂ ಸಹ ವಾಹನವನ್ನು ಕೊಡುತ್ತೇನೆ ಎಂದು ನುಡಿಯುತ್ತಾರೆ. ಆಗಿನ ಕಾಲಕ್ಕೆ ಆರೋಪಿ ಖರೀದಿ ಮಾಡಿದ ಟ್ರ್ಯಾಕ್ಟರನ ಬೆಲೆ ರೂ.6,75,000/-ಇತ್ತು. ಅದಕ್ಕೆ ಡಿಸ್ಕೌಂಟ ರೂ.1,30,000/-ಕೊಟ್ಟಿರುತ್ತೇನೆ. ಆರೋಪಿಯು ರೂ. 4,77,719/-ಗಳನ್ನು RTGS ಮೂಲಕ ನಮ್ಮ ಸಂಸ್ಥೆಗೆ ಜಮಾ ಮಾಡಿರುತ್ತಾರೆ ಎಂದರೆ ಸರಿ. ರೂ. 1,97,281/-ಗಳನ್ನು ಆರೋಪಿಗೆ ನಾನು ಡಿಸ್ಕೌಂಟ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಸಂಸ್ಥೆಗೆ ಯಾವುದೇ ಹಣ ಕೊಡಲು ಬಾಕಿ ಇಲ್ಲದೇ ಇದ್ದರೂ ಸಹ ಆರೋಪಿಗೆ ವಿನಾಃ ಕಾರಣ ಈ ಪ್ರಕರಣ ದಾಖಲು ಮಾಡಿ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನೀಡಿರುವಂತಹ ಎಲ್ಲ ವಿಚಾರಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.